ಆದರೆ ಇಷ್ಟು ವರ್ಷಗಳ ನಂತರ ನೀನಾ, ನಾನೊಬ್ಬ ಹಳೆ ಕಂದಾಚಾರದ, ಸಂಕುಚಿತ ಸ್ವಭಾವದ, ತುಂಬಾ ಸ್ವಾರ್ಥಿ ಎಂಬ ಅವೇ ಆರೋಪಗಳನ್ನು ಹೊರಿಸಿದಳು. ನಾನು ನನ್ನ ಬಗ್ಗೆ ಮಾತ್ರ ಯೋಚಿಸುತ್ತೇನೆ, ಒಬ್ಬ ವಿವಾಹಿತ ವ್ಯಕ್ತಿಯಂತೆ ವರ್ತಿಸುವುದಿಲ್ಲ, ನನಗೆ 'ನಾನೇ' ಎಂಬುದು ಮುಖ್ಯವಾಗುತ್ತದೆ ಎಂದೂ ಆರೋಪಿಸುತ್ತಿದ್ದಳು.

ಈಗ ನಾನಿಲ್ಲಿ ಒಂಟಿಯಾಗಿ ಕೂತು ಪಶ್ಚಾತ್ತಾಪಪಡುತ್ತಿದ್ದೇನೆ. ನನ್ನ ಒಂಟಿತನದಿಂದ ಗಾಸಿಗೊಂಡಿದ್ದೇನೆ. ನಾವು ಒಂಟಿಯಾಗಿರಲು ಸಾಧ್ಯವಿಲ್ಲ ಎಂಬುದರ ಅರಿವಿದ್ದಾಗ್ಯೂ ನಮಗೇಕೆ ಸಂಬಂಧವನ್ನು ಕಾಯಂ ಆಗಿಟ್ಟುಕೊಳ್ಳುವುದು ಕಷ್ಟವಾಗುತ್ತದೆ? ನೀನಾಳೊಂದಿಗಿನ ವಿಚ್ಛೇದನದ ಪ್ರಕ್ರಿಯೆಯಲ್ಲಿ ಯಾವುದೇ ವಿಘ್ನವಿರಲಿಲ್ಲ; ಸೌಂದ್ರಾಳೊಂದಿಗೂ ವಿಚ್ಛೇದನದ ಪ್ರಕ್ರಿಯೆಯಲ್ಲಿ ಯಾವುದೇ ವಿಘ್ನ ಎದುರಾಗಲಿಲ್ಲ; ಮಕ್ಕಳು ಯಾರ ಬಳಿ ಇರಬೇಕೆಂಬ ವ್ಯಾಜ್ಯವಿರಲಿಲ್ಲ, ಮಕ್ಕಳ ಖರ್ಚುವೆಚ್ಚವನ್ನು ಭರಿಸುವ ಅವಶ್ಯಕತೆಯಿರಲಿಲ್ಲ, ಮನೆ ಮತ್ತು ಇನ್ನಿತರ ವಸ್ತುಗಳ ಹಂಚಿಕೆಯಲ್ಲೂ ತಕರಾರಿರಲಿಲ್ಲ. ಇಲ್ಲಿ ಎಲ್ಲವೂ ನೀನಾಗೆ ಸೇರಿದ್ದವು. ಡೆನ್ಮಾರ್ಕ್‌ನಲ್ಲಿ ವಿಚ್ಛೇದನಕ್ಕೆ ಸಂಬಂಧಿಸಿದ ಕಾನೂನಿನ ನಿಯಮಗಳು ಸಹ ಸ್ಕಾಟ್ಲೆಂಡಿಗಿಂತ ಸರಳವಾಗಿದ್ದವು, ಹೀಗಾಗಿ ತುಂಬಾ ಸರಳವಾಗಿ, ಪರಸ್ಪರ ಒಪ್ಪಿಗೆಯ ಮೇರೆಗೆ ನಮ್ಮಿಬ್ಬರ ವಿಚ್ಛೇದನವಾಯಿತು. ನಾವಿಬ್ಬರು, ಪ್ರೀತಿಯಿಂದಂತೂ ಒಟ್ಟಿಗೆ ಇರಲು ಸಾಧ್ಯವಾಗಲಿಲ್ಲ, ಕಡೇಪಕ್ಷ ಘನತೆ–ಗಾಂಭೀರ್ಯದಿಂದ ಬೇರೆಯಾಗಬೇಕು ಎಂಬ ಸಿದ್ಧಾಂತವನ್ನು ಪಾಲಿಸಿದೆವು.

ನನಗೆ ರಾತ್ರಿ ವೇಳೆಯಲ್ಲಿ ಮುಕ್ತ ಆಗಸದ ಕೆಳಗೆ ನಡೆಯುವ ಈ ಅಭ್ಯಾಸ ಮೊದಲನೆಯದಾಗಿದೆ. ಕಾಡು ದೂರಕ್ಕೆ ಹೋಗಿದೆ, ಕಾಡುಗಳ ಸ್ಥಳಗಳನ್ನು ಹೊಲಗಳು ಆವರಿಸಿವೆ ಅನ್ನಿಸಿತು. ಬೆಳದಿಂಗಳ ಪ್ರಕಾಶದಲ್ಲಿ, ಎರಡೂ ಕಡೆಯ ಸಾಸಿವೆಯ ಹಳದಿ ಹೊಲಗಳ ನಡುವೆ, ಮೂರ್ನಾಲ್ಕು ಗಂಟೆಗಳ ವೇಗದಲ್ಲಿ ನಾನು ಓಡುತ್ತಿದ್ದೇನೆ. ಹೊಲಗಳಲ್ಲಿ ವಿಚಿತ್ರ ಸೌಂದರ್ಯವಿದೆ. ಅನೇಕ ಕಡೆಗಳಲ್ಲಿ ಮಣ್ಣಿನ ರಸ್ತೆಗಳಿವೆ, ಹುಲ್ಲಿನ ಪ್ರದೇಶಗಳಲ್ಲಿ ರಾತ್ರಿ ವೇಳೆಯಲ್ಲಿ ನಿರಂತರವಾಗಿ ಕೀಟ–ಪತಂಗಗಳ ಸ್ವರ ಪ್ರತಿಧ್ವನಿಸುತ್ತಿದೆ. ರಾತ್ರಿ ವೇಳೆಯಲ್ಲಿ ಚಿಕ್ಕ ಜೀವಿಗಳು ಸಕ್ರಿಯವಾಗುತ್ತವೆ ಅಥವಾ ರಾತ್ರಿಯ ನಿಶ್ಶಬ್ದತೆಯಲ್ಲಿ ಅವುಗಳ ಕ್ಷೀಣ ಧ್ವನಿಗಳು ಕೇಳಿಸುತ್ತಿವೆ. ಕಾಡು ಮೃಗಗಳ ಚೀತ್ಕಾರ ಸಹ ಕೇಳಿ ಬರುತ್ತಿದೆ. ಶರೀರಕ್ಕೆ ಗಾಳಿಯ ಹೊಡೆತ ಬೀಳುತ್ತಿದೆ. ಕಾಲುಗಳಿಗೆ ಕಲ್ಲು–ಮುಳ್ಳುಗಳು ಚುಚ್ಚುತ್ತಿವೆ. ಜೀವನದ ಹಾದಿ ಕಲ್ಲು ಮುಳ್ಳುಗಳಿಂದಾವರಿಸಿದೆ. ಆದರೆ ನಾನು ಕಲ್ಲುಗಳ ಮಾರ್ಗದಲ್ಲಿ ನಿರ್ಭಯದಿಂದ ಸಾಗುತ್ತಿದ್ದೆ. ಆಗಲೇ ನನ್ನದೊಂದು ಚಪ್ಪಲಿ ಹರಿಯಿತು. ರಾತ್ರಿಯ ಅಂಧಕಾರದಲ್ಲಿ ಕಾಲೆತ್ತಿ, ಚಪ್ಪಲಿ ತೆಗೆದು, ಅದನ್ನು ಹೊರಳಿಸಿ ನೋಡಿದೆ; ಚಪ್ಪಲಿಯ ಕೆಳಗಿನ ಅಟ್ಟೆ ತುಂಡಾಗಿತ್ತು.

## ಕಳೆದ ಸಂಚಿಕೆಯಲ್ಲಿ



ತಂದೆಯ ಸಾವಿನ ಸಮಯದಲ್ಲಿ ತಾನು ಇಲ್ಲದೆ ಹೋದುದಕ್ಕೆ ನೀನಾಳ ಮೇಲೆ ಪಾಲ್ ಕೋಪಗೊಂಡ. ಥಾಯ್ಲೆಂಡ್‌ನ ಮಧುಚಂದ್ರ ವೈಮನಸ್ಸಿನಲ್ಲಿ ಕೊನೆಗೊಂಡಿತು. ಬದುಕು ನಿಧಾನವಾಗಿ ಹಳಿಗೆ ಬರುತ್ತಿರುವಾಗ, ಪಾಲ್‌ನ ಐವತ್ತನೇ ವರ್ಷದ ಸಂಭ್ರಮ ಎದುರಾಯಿತು. ಐವತ್ತರ ಸಂಭ್ರಮವನ್ನು ದೊಡ್ಡದಾಗಿ ಆಚರಿಸಲು ನೀನಾ ಸಿದ್ಧತೆ ನಡೆಸಿದಳು. ಪಾಲ್ ಮತ್ತು ನೀನಾಳ ಆಪ್ತೇಷ್ಟರು ಕಾರ್ಯಕ್ರಮಕ್ಕೆ ಆಗಮಿಸಿದರು. ಪಾಲ್‌ನ ತಾಯಿಯೂ ಮಗನ ಐವತ್ತರ ಹುಟ್ಟುಹಬ್ಬಕ್ಕೆ ಆಗಮಿಸಿದ್ದರು. ಉಡುಗೊರೆಗಳು ದೊರೆತವು. ಕಾರ್ಯಕ್ರಮದಲ್ಲಿ ಪಾಲ್ ತೊಡುವ ಉಡುಪಿನ ಕುರಿತು ದಂಪತಿಯ ನಡುವೆ ಮಾತುಕತೆ ನಡೆಯಿತು. ಹುಟ್ಟುಹಬ್ಬದ ದಿನದಂದೂ ತನ್ನನ್ನು ಹೀಯಾಳಿಸಿದ ಪತ್ನಿಯ ಬಗ್ಗೆ ಪಾಲ್‌ಗೆ ಕೋಪ ಬಂದು, ಇನ್ನು ಈ ಹೆಣ್ಣಿನೊಂದಿಗೆ ಬಾಳುವುದು ಸಾಧ್ಯವಿಲ್ಲ ಎಂದು ಮನಸ್ಸಿನಲ್ಲೇ ಅಂದುಕೊಂಡ. ವಿಧಿಲಿಖಿತ ಬೇರೆಯದೇ ಇತ್ತು. ಸಂತೋಷಕೂಟದಲ್ಲಿ ನೀನಾ, ತಾವಿಬ್ಬರೂ ಬೇರೆಯಾಗುತ್ತಿರುವುದಾಗಿ ಪ್ರಕಟಿಸಿದಳು. ಪಾಲ್ ಅವಮಾನದಿಂದ ತತ್ತರಿಸಿದ. ನೀನಾಳ ಮನೆ ಮತ್ತು ಮನಸ್ಸಿನಿಂದ ಇದ್ದಕ್ಕಿದ್ದಂತೆ ದೂರವಾಗುವುದನ್ನು ಅರಗಿಸಿಕೊಳ್ಳುವುದು ಐವತ್ತರ ವಯಸ್ಸಿನಲ್ಲಿ ಸುಲಭವಾಗಿರಲಿಲ್ಲ.

ಈ ಚಪ್ಪಲಿಗಳು ಇಷ್ಟು ಬೇಗ ನನಗೆ ಕೈಕೊಡುತ್ತವೆ ಎಂದು ನಾನು ಯೋಚಿಸಿರಲಿಲ್ಲ. ಹರಿದ ಚಪ್ಪಲಿಯಿಂದ ನಡೆಯುವುದು ಕಷ್ಟವಾಯಿತು. ಸರಿ, ಚಪ್ಪಲಿ ಕಳಚಿ ಕೈಯಲ್ಲಿ ಹಿಡಿದೆ. ಈಗ ಬರಿಗಾಲಿನಲ್ಲಿದ್ದೇನೆ. ನಡಿಗೆ ನಿಧಾನವಾಯಿತು. ಈ ನನ್ನ ಬರಿಗಾಲು ನನ್ನನ್ನು ದೇವಸ್ಥಾನದವರೆಗೆ ಕರೆದೊಯ್ಯಲಾರವು. ಈಗ ಏನಾದರೂ ಮಾಡಬೇಕು.

ನಾಲ್ಕೈದು ಕಿ.ಮೀ. ಬರಿ ಕಾಲಿನಲ್ಲಿಯೇ ಸಾಗುತ್ತಿದ್ದೆ. ಕಾಲ ಕೆಳಗಿನ ಭೂಮಿ ಗಡುಸಾಗಿತ್ತು. ಕಾಲುಗಳ ಹಿಮ್ಮಡಿ ಒಡೆದು ರಕ್ತ ಸೂಸಿತು. ಏನು ಮಾಡಲಿ? ಯಾವ ಉಪಾಯವಿಲ್ಲ. ಮತ್ತೆ ಕಾಲುಗಳಿಗೆ ಚಪ್ಪಲಿ ಹಾಕಿಕೊಂಡೆ. ಜೇಬಿನಿಂದ ಕರ್ಚೀಫ್ ತೆಗೆದು ಅದರಿಂದ ಹಿಮ್ಮಡಿಗೆ ಚಪ್ಪಲಿ ಕಟ್ಟಲು ಪ್ರಯತ್ನಿಸಿದೆ, ಆದರೆ ಕರ್ಚೀಫ್ ಚಿಕ್ಕದಾಗಿತ್ತು. ಏನು ಮಾಡುವುದು? ಇದ್ದಕ್ಕಿದ್ದಂತೆ ಬೆಳದಿಂಗಳಿನಲ್ಲಿ ನನ್ನ ದೃಷ್ಟಿ ಒಂದು ಬಳ್ಳಿಯಿದ್ದ ಮರದ ಮೇಲೆ ಬಿತ್ತು. ಮರದಿಂದ ಕೆಲವು ಉದ್ದನೆಯ ಬಳ್ಳಿಗಳನ್ನು ಮುರಿದು ಕಾಲಿಗೂ ಚಪ್ಪಲಿಗೂ ಕಟ್ಟಿದೆ. ಕಾಲು ಬಿಗಿಯಾದರೂ, ಪಾದಗಳಿಗೆ ಆರಾಮವಾಯಿತು.

ಎಲ್ಲಿಗೆ ಹೋಗಲಿ? ದೃಷ್ಟಿ ಹರಿಸಿದಷ್ಟೂ ರಸ್ತೆ; ಕಡೆಗೆ ಒಂದು ಅಪರಿಚಿತ ಮಾರ್ಗದಲ್ಲಿ ಹೊರಳಿದೆ. ಸ್ವಲ್ಪ ದೂರ ಹೋದ ನಂತರ ಮತ್ತೆ ಹೊಸ ರಸ್ತೆಗಳು ಕಂಡವು. ಯಾವ ಮಾರ್ಗ ದೇವಸ್ಥಾನಕ್ಕೆ ಹೋಗುವುದು? ನಕ್ಷೆಯನ್ನು ನೋಡಿದಾಗ, ತಪ್ಪು ಹಾದಿಯಲ್ಲಿ ಸಾಗುತ್ತಿರುವುದು ತಿಳಿಯಿತು. ಸರಿ, ಅಲ್ಲಿಂದ ಹೊರಳಿ ಒಂದೂವರೆ ಫರ್ಲಾಂಗ್ ಮರಳಿ ಬರುತ್ತೇನೆ. ಇನ್ನೊಂದು ಹಾದಿ ಹಿಡಿಯುತ್ತೇನೆ. ಈ ಹಾದಿ ನನ್ನನ್ನು ದೇವಸ್ಥಾನಕ್ಕೆ ತಲುಪಿಸುತ್ತದೆ ಎಂಬ ಭರವಸೆಯಿದೆ. ಆಮೇನ್!

ನಾನು ಅವಳಿಂದ ಪಲಾಯನಗೈದಿರಲಿಲ್ಲ.

ಸೌಂದ್ರಾಳೊಂದಿಗಿನ ಮೂರು ವರ್ಷದ ಅಲ್ಪಾವಧಿಯ ಜೀವನ ನಾವು ಪರಸ್ಪರ ಹಂಚಿಕೊಳ್ಳಲು ಸಾಕಷ್ಟು ಅವಕಾಶವನ್ನು ಕೊಟ್ಟಿತ್ತು. ನಾವು ನಮ್ಮ ಮೂರು ವರ್ಷದ ವೈವಾಹಿಕ ಜೀವನದಲ್ಲಿ ಗಳಿಸಿದ್ದನ್ನು ಪರಸ್ಪರ ಅರ್ಧರ್ಧ ಹಂಚಿಕೊಂಡಿದ್ದೆವು. ಪುತ್ರಿಯರ ಕಸ್ಟಡಿ ಸೌಂದ್ರಾಳಿಗೆ ಸಿಕ್ಕಿತ್ತು. ನನಗೆ ವಿಸಿಟಿಂಗ್ ರೈಟ್ಸ್ ಸಿಕ್ಕಿತ್ತು. ನನಗೆ ಶಾಲೆಯ ರಜಾಗಳು ಲಭಿಸಿದಾಗ ಲೂಸಿ ಮತ್ತು ಗ್ರೇಸಿಯೊಂದಿಗೆ ಎಲ್ಲಿಗಾದರೂ ಟೂರ್ ಅವಶ್ಯವಾಗಿ ಹೋಗುತ್ತಿದ್ದೆ. ಈ ಬಾರಿಯ ಬೇಸಿಗೆ ರಜೆಯಲ್ಲಿ ಸ್ಕಾಟ್ಲಂಡಿಗೆ ಒಂದು ತಿಂಗಳಿಗಾಗಿ ಒಂದು ಸಮ್ಮರ್ ಹೌಸನ್ನು ಬುಕ್ ಮಾಡಿಸಿದ್ದೆ.

ಪ್ರತಿ ಭಾನುವಾರ ಲೂಸಿ ಮತ್ತು ಗ್ರೇಸಿಯೊಂದಿಗೆ ಸ್ಕೈಪ್‌ನಲ್ಲಿ ಮಾತುಕತೆ ನಡೆಯುತ್ತಿತ್ತು. ಇಬ್ಬರು ಸಮ್ಮರ್ ಹೌಸ್‌ಗೆ ಹೋಗಲು ಉತ್ಸುಕರಾಗಿದ್ದರು. ಬಹುತೇಕ ಮಾತುಕತೆಗಳು ನಮ್ಮ ಕಾರ್ಯಕ್ರಮಗಳ ಬಗ್ಗೆಯೇ ನಡೆಯುತ್ತಿದ್ದವು. ಹೇಗೆ ಹೋಗುವುದು? ಏನೇನು ಪ್ಯಾಕ್ ಮಾಡಬೇಕು? ಅಲ್ಲೇನು ಮಾಡುವುದು? ಕಾರ್ ಬುಕ್ ಆಯಿತೇ? ಅಲ್ಲಿ ಊಟದ ವ್ಯವಸ್ಥೆ ಏನು? – ಈ ಎಲ್ಲಾ ಪ್ರಶ್ನೆಗಳನ್ನು ಲೂಸಿ ಮತ್ತು ಗ್ರೇಸಿ ಕೇಳುತ್ತಿದ್ದರು. ಒಂದು ದಿನ ಅವರು ಹಿಂಜರಿಯುತ್ತಾ ಒಂದು ಪ್ರಶ್ನೆಯನ್ನು ಕೇಳಿದರು, 'ಡ್ಯಾಡ್... ಅಲಾನ್ ಸಹ ನಮ್ಮೊಂದಿಗೆ ಸಮ್ಮರ್ ಹೌಸಿಗೆ ಬರಬಹುದೇ...?'

ನಾನು ವ್ಯಗ್ರನಾದೆ. ಏನು ಹೇಳುವುದು? ಅಲಾನ್ ಸೌಂದ್ರಾ ಮತ್ತು ಅವಳ ಎರಡನೆಯ ಪತಿಯ ಮಗನಾಗಿದ್ದ. ಅಲಾನ್ ಲೂಸಿ ಮತ್ತು ಗ್ರೇಸಿಯ ಹಾಫ್ ಬ್ರದರ್ (ಮಲ ತಮ್ಮ) ಆಗಿದ್ದ. ಲೂಸಿ ಮತ್ತು ಗ್ರೇಸಿ ಇಬ್ಬರಿಗೂ ಅಲಾನ್ ತುಂಬಾ ಪ್ರೀತಿಯ ತಮ್ಮನಾಗಿದ್ದ. ನಾನು ಯೋಚಿಸಿ, ಲೂಸಿ ಮತ್ತು ಗ್ರೇಸಿಯ ಮನಸ್ಸಿಗೆ ಬೇಸರವಾಗಬಾರದೆಂದು ಒಪ್ಪಿಗೆ ಸೂಚಿಸಿದೆ. ಲೂಸಿ ಮತ್ತು ಗ್ರೇಸಿಯೊಂದಿಗೆ ಇಂಥ ದೀರ್ಘ ಸಮಯವನ್ನು ಕಳೆಯುವ ಸಂದರ್ಭ ಬಹುಶಃ ಇದೇ ಕೊನೆಯ ಬಾರಿಯಾಗಬಹುದೆಂದು ನನಗೆ ಅನ್ನಿಸುತ್ತಿತ್ತು. ಇಬ್ಬರೂ ಯೌವನಕ್ಕೆ